ನಮ್ಮ ಹೊಲ ನಮ್ಮ ದಾರಿ ಯೋಜನೆ

106(2411); ಶ್ರೀ ಕೃಷ್ಣಾರೆಡ್ಡಿ ಎಂ. (ಚಿಂತಾಮಣಿ)

ಅ) ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ "ನಮ್ಮ ಹೊಲ ನಮ್ಮ ದಾರಿ" ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ ವಿವರ ನೀಡುವುದು;

ಆ) ಸದರಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು (ವಿವರ ನೀಡುವುದು);

ಇ) ಕಾಮಗಾರಿಗಳನ್ನು ಕೈಗೊಂಡಿರದಿದ್ದಲ್ಲಿ ಯಾವ ಕಾಲ ಮಿತಿಯೊಳಗೆ ಸದರಿ ಯೋಜನೆಯಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ "ನಮ್ಮ ಹೊಲ–ನಮ್ಮ ದಾರಿ" ಕಾರ್ಯಕ್ರಮದಡಿ ಕಳೆದ 2 ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಕೆಳಕಂಡಂತಿದೆ.

ವರ್ಷ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಒಟ್ಟು ಕಾಮಗಾರಿಗಳ ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)
2013–14	66	0	66	56.5
2014–15	54	14	68	108
ಒಟ್ಟು	**120**	**14**	**134**	**164.5**

ಆ) ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ "ನಮ್ಮ ಹೊಲ–ನಮ್ಮ ದಾರಿ" ಕಾರ್ಯಕ್ರಮದ ಕಾಮಗಾರಿಗಳ ಅನುಷ್ಠಾನಕ್ಕಾಗಿ ಪ್ರತ್ಯೇಕವಾಗಿ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ. ಲಭ್ಯವಿರುವ ಒಟ್ಟು ಅನುದಾನದಲ್ಲಿಯೇ ಈ ಕಾರ್ಯಕ್ರಮದ ಕಾಮಗಾರಿಗಳಿಗೂ ವೆಚ್ಚ ಭರಿಸಲಾಗುವುದು. ಅದರಂತೆ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿಗೆ ಈ ಯೋಜನೆಯಡಿ ಒಟ್ಟಾರೆಯಾಗಿ 2013–14ನೇ ಸಾಲಿನಲ್ಲಿ ರೂ. 341.43 ಲಕ್ಷ ಮತ್ತು 2014–15ನೇ ಸಾಲಿನಲ್ಲಿ ರೂ. 802.49 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಇ) ಹಕ್ಕು ಆಧಾರಿತ ಮತ್ತು ಬೇಡಿಕೆ ಆಧಾರಿತ ಕಾರ್ಯಕ್ರಮವಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಚಿಂತಾಮಣಿ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಕೂಲಿ ಕಾರ್ಮಿಕರ ಬೇಡಿಕೆಯ ಅನುಸಾರ "ನಮ್ಮ ಹೊಲ–ನಮ್ಮ ದಾರಿ" ಕಾರ್ಯಕ್ರಮದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಶ್ರೀ ಎಂ. ಕೃಷ್ಣಾರೆಡ್ಡಿ ಎಂ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ, ನಾನು ಇವತ್ತು ಬೆಳಿಗ್ಗೆ ಚಿಕ್ಕಬಳ್ಳಾಪುರ ಜಿಲ್ಲೆ Technical Engineerರವರಿಗೆ ಫೋನ್ ಮಾಡಿ ಮಾತನಾಡಿದಾಗ 50 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ಹೇಳಿದರು. EO ಅವರನ್ನು ನಾನು ದೂರವಾಣಿಯಲ್ಲಿ ಸಂಪರ್ಕ ಮಾಡಿದಾಗ ಯಾವುದೇ ಕಾಮಗಾರಿ ಬಗ್ಗೆ ನನಗೆ ಗೊತ್ತಿಲ್ಲ, ongoing ಏನು ನಡೆಯುತ್ತಿದೆ, ಇದೂ ಕೂಡ ನಮಗೆ ಗೊತ್ತಿಲ್ಲವೆಂದು ಹೇಳಿದರು. ಆದರೆ ಇಲ್ಲಿ ಒಟ್ಟು ಕಾಮಗಾರಿಗಳ ಸಂಖ್ಯೆ 134 ಪೂರ್ಣಗೊಂಡಿರುವ ಕಾಮಗಾರಿಗಳು 120 ಎಂದು ಹೇಳಿದ್ದಾರೆ. ಜವಾಬ್ದಾರಿ

ಇರತಕ್ಕಂತಹ EO ನನಗೆ ಏನೂ ಗೊತ್ತಿಲ್ಲ, ಪೂರ್ಣವಾಗಿರತಕ್ಕಂತಹ ಕಾಮಗಾರಿಗಳ ಬಗ್ಗೆಯೂ ನನಗೆ ಗೊತ್ತಿಲ್ಲ. ಈಗ ನಡೆಯುತ್ತಿರತಕ್ಕಂತಹ ಕಾಮಗಾರಿಗಳ ಬಗ್ಗೆಯೂ ನನಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು CEO ನೇತೃತ್ವದಲ್ಲಿ ಒಂದು ತನಿಖೆ ನಡೆಸಬೇಕು.

ಅಧ್ಯಕ್ಷರು: ಯಾವ ಉದ್ದೇಶಕ್ಕಾಗಿ? ನೀವು ಪ್ರಶ್ನೆ ಏನು ಕೇಳಿದ್ದೀರಿ, ಸರ್ಕಾರದಿಂದ ಏನಾಗಬೇಕೆಂದು ಕೇಳಿ.

ಶ್ರೀ ಎಂ. ಕೃಷ್ಣಾರೆಡ್ಡಿ ಎಂ:– ಸರ್ಕಾರದವರು 126 ಎಂದು ಹೇಳುತ್ತಿದ್ದಾರೆ, EO ನನಗೇನೂ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಅದು ಅವನದ್ದು ಬಿಡಿ ಇವರಿಗೆ ಕೇಳಿ.

ಶ್ರೀ ಎಂ. ಕೃಷ್ಣಾರೆಡ್ಡಿ ಎಂ:– CEO ನೇತೃತ್ವದಲ್ಲಿ ಒಂದು ತನಿಖೆಯಾಗಬೇಕು. ನನ್ನ ಮೂರನೇ ಪ್ರಶ್ನೆಗೆ ಕಾರ್ಮಿಕರ ಬೇಡಿಕೆ ಅನುಸಾರ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನೂ ಹೆಚ್ಚಿನ ರಸ್ತೆಗಳು ಆಗಬೇಕು ಎನ್ನುವಂತಹ ಆಗ್ರಹವನ್ನು ನಾನು ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್: ಮಾನ್ಯ ಅಧ್ಯಕ್ಷರೆ, EO ಗೆ ಈ ವಿಷಯ ತಿಳಿದಿರಲಿಕ್ಕಿಲ್ಲ. ಪಂಚಾಯತಿ ಮಟ್ಟದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಆದರೆ ಅವನು ಮಾಹಿತಿ ತೆಗೆದುಕೊಂಡು ನಿಮಗೆ ಹೇಳಬೇಕಾಗಿತ್ತು. ಈಗ ನಾವೇನು ಅಂಕಿ ಸಂಖ್ಯೆ ಕೊಟ್ಟಿದ್ದೇವೆ, ಇದರಲ್ಲಿ ಏನಾದರೂ ತಪ್ಪುಗಳಿದ್ದರೆ, ಇದರಲ್ಲಿ ವ್ಯತ್ಯಾಸವಿದೆ, ಇದು ಸತ್ಯಕ್ಕೆ ದೂರವಾಗಿದೆ ಎಂದು ಹೇಳಿದರೆ, ಅದರ ಬಗ್ಗೆ ನೀವು ಯಾರಿಗೆ ಹೇಳುತ್ತೀರಿ ಅವರ ಕಡೆಯಿಂದ ತನಿಖೆ ಮಾಡಿಸುತ್ತೇವೆ. ತಾವು ಕಾಮಗಾರಿಗಳನ್ನು ಕೈಗೊಳ್ಳುವುದರ ಸಲುವಾಗಿ ನಮ್ಮ ಹೊಲ ನಮ್ಮ ದಾರಿಗೆ ಹಣಕಾಸನ್ನು ನೀವು ಪ್ರತ್ಯೇಕವಾಗಿ

ಕೊಡುತ್ತೀರಾ ಎಂದು ಕೇಳಿದ್ದೀರಿ, ಮೊದಲು NREGA ಯಿಂದ ಮಾತ್ರ ನಮ್ಮ ಹೊಲ ನಮ್ಮ ದಾರಿ ಯೋಜನೆಯನ್ನು ತೆಗೆದುಕೊಳ್ಳುತ್ತಿದ್ದೆವು. ಆದರೆ ಇತ್ತೀಚೆಗೆ ಕೆಲವು ಉತ್ತಮವಾದ ಉದಾಹರಣೆಗಳು ಹಾಗೂ ನಮ್ಮ ಸರ್ಕಾರದ ಸ್ವಲ್ಪ ಮಟ್ಟಿನ ನೀತಿ ಬದಲಾವಣೆ ಹಿನ್ನೆಲೆಯಲ್ಲಿ ಎಲ್ಲಿ ನಮ್ಮ ಹೊಲ ನಮ್ಮ ದಾರಿಯನ್ನು ಒಂದು ಲಕ್ಷ ರೂಪಾಯಿಗೆ ಒಂದು ಕಿ.ಮಿ. ನಂತೆ formation ಮಾಡುತ್ತಾರೋ ಆ ಕಾರ್ಯಕ್ರಮದಲ್ಲಿ ಪ್ರೋತ್ಸಾಹಧನವಾಗಿ 30–54 ಹೆಡ್‌ನಲ್ಲಿ ಕೊಡುತ್ತಿದ್ದೇವೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಕ್ತಾಯವಾಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, 08.07.2015ರ ಎಂಟನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 180 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.